# ನಮ್ಮ ಮಾತೃಭೂಮಿ ಭಾರತ

ನಾ.ವೆಂ. ದೇಶಪಾಂಡೆ.

**ನಾವು ಕೇವಲ ಸ್ವತಂತ್ರರಾದರೆ ಸಾಲದು, ನಮ್ಮ ದೇಶವನ್ನು ಉನ್ನತಿಗೇರಿಸುವ ಹೊಣೆಗಾರಿಕೆಯೂ ನಮ್ಮದಾಗಬೇಕು ಎಂಬುದನ್ನು ಒತ್ತಿ ಹೇಳಿರುವ ಶ್ರೀದೇಶಪಾಂಡೆಯವರು ಧಾರವಾಡದವರು.**

**ಜ**ನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ ಎಂಬ ಸಂಸ್ಕೃತ ಸುಭಾಷಿತವು ಜನನಿ—ಜನ್ಮಕೊಟ್ಟ ತಾಯಿ ಮತ್ತು ಜನ್ಮಭೂಮಿ—ನಾವು ಜನಿಸಿರುವ ಭೂಮಿ(ದೇಶ) ಅನೇಕ ಜನರು ಬಯಸುವ ಸ್ವರ್ಗಕ್ಕಿಂತ ಶ್ರೇಷ್ಠ ಎಂದು ಹೇಳುತ್ತ, ಜನ್ಮಕೊಟ್ಟ ನಮ್ಮ ತಾಯಿಯ ಹಾಗೂ ನಾವು ಜನಿಸಿರುವ ದೇಶದ ಮಹತ್ವವನ್ನು ಎತ್ತಿ ತೋರಿಸುತ್ತದೆ. ಒಂಭತ್ತು ತಿಂಗಳು ಹೊತ್ತು, ಹೆತ್ತು ತಾನು ಎಷ್ಟೇ ಕಷ್ಟನಷ್ಟಗಳನ್ನು ಅನುಭವಿಸಿದರೂ ಯಾವಾಗಲೂ ನಮಗೆ ಒಳಿತನ್ನೇ ಮಾಡುವ ನಮ್ಮ ತಾಯಿಯಂತೆ, ನಮ್ಮೆಲ್ಲರಿಗೂ ನೀರು, ಆಹಾರ, ಸಂಪತ್ತನ್ನು ಕೊಟ್ಟು ನಮ್ಮನ್ನು ಸಲಹುತ್ತಿರುವ ನಮ್ಮ ಜನ್ಮಭೂಮಿ ಭಾರತಮಾತೆಯು ನಮ್ಮೆಲ್ಲರಿಗೂ ಪೂಜ್ಯಳು.

ನೂರಾರು ವರ್ಷಗಳ ಪರರಾಷ್ಟ್ರೀಯ ಆಡಳಿತ ಶೃಂಖಲೆಗಳಿಂದ ನಮ್ಮ ಮಾತೃಭೂಮಿ ಭಾರತದೇಶವನ್ನು ಮುಕ್ತಮಾಡಲು ಕಳೆದ ಶತಮಾನದ ಪೂರ್ವಾರ್ಧದಲ್ಲಿ ನಮ್ಮ ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರ ನೇತೃತ್ವದಲ್ಲಿ ಚಳವಳಿಯು ಆರಂಭವಾಯಿತು. ಆಗ ಅವರ ಕರೆಗೆ ಓಗೊಟ್ಟು ಅನೇಕ ಯುವಕ, ಯುವತಿಯರು ಎಚ್ಚೆತ್ತು ಚಳವಳಿಯಲ್ಲಿ ಸೇರಿದರು. ಅವರಲ್ಲಿ ರಾಜೇಂದ್ರಪ್ರಸಾದ್, ಜವಾಹರಲಾಲ ನೆಹರು, ಸುಭಾಷ ಚಂದ್ರ ಬೋಸ್, ವಲ್ಲಭಭಾಯಿ ಪಟೇಲ, ಬಾಲ ಗಂಗಾಧರ ತಿಲಕ, ಗೋಪಾಲಕೃಷ್ಣ ಗೋಖಲೆ, ಅಬ್ದುಲ್ ಕಲಮ್ ಆಝಾದ್ ಮತ್ತು ಕಸ್ತುರ ಬಾ ಗಾಂಧಿ, ಕಮಲಾ ನೆಹರು, ಸರೋಜಿನಿ ನಾಯಿಡು ಇವರು ಅಗ್ರಗಣ್ಯರು. ಇವರಲ್ಲದೇ ಇನ್ನೂ ಅನೇಕರು ಸ್ವ-ಸುಖವನ್ನು ಬದಿಗೊತ್ತಿ ಸಕ್ರಿಯವಾಗಿ ಚಳವಳಿಯಲ್ಲಿ ಭಾಗವಹಿಸಿದರು.

ಅಂದಿನ ದಿನಗಳಲ್ಲಿ ಅಂದಿನ ಸರಕಾರದ ವಿರುದ್ಧ ಅಸಹಕಾರ ಚಳವಳಿ ನಡೆಯುತ್ತಿರುವಾಗ, ಒಮ್ಮೆ ಕೆಲ ಯುವಕರು ಸ್ವಾಮಿ ವಿವೇಕಾನಂದರನ್ನು ಕಂಡು ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟದಲ್ಲಿ ಅವರ ಸಹಾಯವನ್ನು ಕೇಳಿದಾಗ ಅವರು ಆ ಯುವಕರಿಗೆ, "ನಾನು ನಾಳೆಯೇ ಸ್ವಾತಂತ್ರ್ಯವನ್ನು ದೊರಕಿಸಿ ಕೊಡಬಲ್ಲೆ. ಆದರೆ ಅದನ್ನು ರಕ್ಷಿಸಿಕೊಳ್ಳಬಲ್ಲ ಜನರೆಲ್ಲಿದ್ದಾರೆ? ಮೊದಲು ಅಂಥ ಜನರು ಕಂಕಣಬದ್ಧರಾಗಿ ಬರಲಿ. ಆಗ ಸ್ವಾತಂತ್ರ್ಯವು ನಿಮ್ಮ ಕಾಲುಡಿಯಲ್ಲಿ ಬಂದು ಬೀಳುವುದು. ದೇಶದ ಸ್ವಾತಂತ್ರ್ಯ ರಕ್ಷಣೆ ದೊಡ್ಡ ಹೊಣೆ" ಎಂದು ಮಾರ್ಮಿಕವಾಗಿ ಹೇಳಿದರು. ಸ್ವಾಮಿ ವಿವೇಕಾನಂದರ ಈ ಎಚ್ಚರಿಕೆಯ ನುಡಿಗಳು ಸಾರ್ವಕಾಲಿಕ ಸತ್ಯ, ಸಮಯೋಚಿತವೂ ಆಗಿವೆ.

ಮಹಾತ್ಮಾ ಗಾಂಧೀಜಿಯವರ ನಾಯಕತ್ವದಲ್ಲಿ ನಡೆದ ಅವಿರತ ಅಸಹಕಾರ ಚಳವಳಿ ಮತ್ತು ಅನೇಕ ಸ್ವಾತಂತ್ರ್ಯ ಯೋಧರ ತ್ಯಾಗ, ಬಲಿದಾನ, ಪ್ರಾಣಾರ್ಪಣೆಗಳ ಪರಿಣಾಮವಾಗಿ ನಮ್ಮ ಭಾರತ ದೇಶವು ಸುಮಾರು ಮೂರು ಶತಕಗಳ ಬ್ರಿಟಿಷರ ಆಡಳಿತದಿಂದ (ದಾಸ್ಯದಿಂದ)ಮುಕ್ತವಾಗಿ ೧೫.೮.೧೯೪೭ರಂದು ಸ್ವತಂತ್ರ ರಾಷ್ಟ್ರವಾಗಿ ಅಸ್ತಿತ್ವಕ್ಕೆ ಬಂದಿತು. ಸುವರ್ಣ ಜಯಂತಿಯನ್ನೂ ಆಚರಿಸಿದೆವು. ಆದರೆ, "ನಮ್ಮಲ್ಲಿ ಉಚ್ಚ ರಾಷ್ಟ್ರಾಭಿಮಾನ ಬೆಳೆದಿದೆಯೇ? ನಮ್ಮ ದೇಶಕ್ಕಾಗಿ ನಾವು ಯಾವುದೇ ತ್ಯಾಗಕ್ಕೂ ಸಿದ್ಧರಾಗಿದ್ದೇವೆಯೇ? ಸ್ವಾಮಿ ವಿವೇಕಾನಂದರು ಸ್ವಾತಂತ್ರ್ಯಪೂರ್ವದಲ್ಲಿ ಹೇಳಿದ ಎಚ್ಚರಿಕೆಯ ನುಡಿಗಳಂತೆ ನಾವು ನಮ್ಮ ದೇಶದ ಸ್ವಾತಂತ್ರ್ಯವನ್ನು ರಕ್ಷಿಸಿಕೊಳ್ಳಬಲ್ಲ ಸಮರ್ಥ ನಾಗರಿಕರಾಗಿದ್ದೇವೆಯೇ" ಎಂದು ನಮ್ಮನ್ನೇ ನಾವು ಪ್ರಶ್ನಿಸಿಕೊಂಡು ನಾವೇ ಉತ್ತರಿಸಬೇಕಾಗಿದೆ. ಯಾಕೆಂದರೆ, ನಾವು ಧರ್ಮ, ಜಾತಿ, ಮತ, ಪಂಥ, ಭಾಷೆ ಇತ್ಯಾದಿಗಳ ಹೆಸರಿನಲ್ಲಿ ನಮ್ಮ ನಮ್ಮೊಳಗೇ ಕಾದಾಡುತ್ತೇವೆ. ನಮ್ಮ ಊರು, ಜಿಲ್ಲೆ, ರಾಜ್ಯ ಇವುಗಳ ಹಿತವನ್ನೇ ಮುಂದಿಟ್ಟುಕೊಂಡು ಬಡಿದಾಡುತ್ತೇವೆ. ಕ್ಷುಲ್ಲಕ ಕಾರಣಗಳಿಗಾಗಿಯೂ ಅಸಹಕಾರ ಚಳವಳಿ ಹರತಾಳ ನೆಪದಲ್ಲಿ ಸರಕಾರಿ, ಸಾರ್ವಜನಿಕ ಕಟ್ಟಡಗಳಿಗೆ, ವಾಹನಗಳಿಗೆ ಜಖಮ್ ಮಾಡುವುದು, ಬೆಂಕಿ ಹಚ್ಚುವುದು ಇತ್ಯಾದಿ ದುಷ್ಟ ವಿನಾಶಕಾರಿ ಕೃತ್ಯಗಳಲ್ಲಿ ತೊಡಗುತ್ತೇವೆ. ನಮ್ಮ ದೇಶದ ಸಂಪತ್ತನ್ನು ನಾವೇ ನಾಶಮಾಡುತ್ತೇವೆ. ಕಳೆದ ಶತಮಾನದಲ್ಲಿ ಮಹಾತ್ಮಾ ಗಾಂಧೀಜಿಯವರು ಅಸಹಕಾರ, ಕರನಿರಾಕರಣೆ ಚಳವಳಿಯಂಥ ಅಸ್ತ್ರಗಳನ್ನು ಅಂದಿನ ಬ್ರಿಟಿಷ್ ಸರಕಾರದ ವಿರುದ್ಧ, ಅದೂ ಕೂಡ ಶಾಂತ ರೀತಿಯಲ್ಲಿ ಉಪಯೋಗಿಸಿದರು. ಆದರೆ ಇಂದು ನಾವೇ ಆರಿಸಿ ಕಳಿಸಿದ ಚುನಾಯಿತ ಪ್ರತಿನಿಧಿಗಳ ಸರಕಾರದೊಡನೆ ಶಾಂತಿಯುತ ಮಾರ್ಗಗಳನ್ನು ಅನುಸರಿಸಿ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವುದನ್ನು ಬಿಟ್ಟು ಅಸಹಕಾರ ಚಳವಳಿ ನೆಪದಲ್ಲಿ ವಿನಾಶಕಾರಿ ಕೃತ್ಯಗಳಲ್ಲಿ ತೊಡಗುತ್ತೇವೆ. ಹಣ, ಹೊನ್ನು ಹಾಗೂ ಬೇರೆ ಆಮಿಷಗಳಿಗೆ ಒಳಗಾಗಿ, ದೇಶದ ಮಹತ್ವದ ಗೌಪ್ಯಮಾಹಿತಿಯನ್ನು ಪರದೇಶಗಳಿಗೆ ಸಾಗಿಸುವ ದೇಶದ್ರೋಹಿಗಳ ಬಗ್ಗೆ ನಾವು ಆಗಾಗ ಸುದ್ದಿ ಪತ್ರಿಕೆಗಳಲ್ಲಿ ಓದುತ್ತಿರುತ್ತೇವೆ. ತಮ್ಮ ಸ್ವಾರ್ಥಕ್ಕಾಗಿ ದೇಶದ ಸಂಪತ್ತನ್ನು ಹರಣ ಮಾಡುವ ದೇಶದ್ರೋಹಿಗಳೂ ನಮ್ಮಲ್ಲಿ ಇಲ್ಲವೆನ್ನುವಂತಿಲ್ಲ.

ಇದೆಲ್ಲವನ್ನೂ ಗಮನಿಸಿದರೆ, ನಾವು ಸ್ವಾತಂತ್ರ್ಯ ಪಡೆದು ಸುವರ್ಣ ಜಯಂತಿಯನ್ನು ಆಚರಿಸಿದರೂ ನಾವು ಯೋಗ್ಯರಾದ ಭಾರತೀಯ ನಾಗರಿಕರಾಗಿ ಬೆಳೆದಿಲ್ಲ. ಮಹರ್ಷಿ ಅರವಿಂದರು ನಮ್ಮ ದೇಶದ ಬಗ್ಗೆ ಮಾತನಾಡುತ್ತ, "ಈ ಭಾರತಮಾತೆ ಭಾರತದ

ಎಲ್ಲ ಹಿಂದು, ಸಿಖ್, ಜೈನ, ಬೌದ್ಧ, ಮುಸ್ಲಿಮ್, ಪಾರಸಿ, ಕ್ರೈಸ್ತರಿಗೂ ತಾಯಿ. ನಾಸ್ತಿಕರಿಗೂ ಕೂಡ ತಾಯಿ" ಎಂದು ಹೇಳಿರುವರು. ಆದ್ದರಿಂದ ನಾವು ಯಾವುದೇ ಧರ್ಮದವರಾಗಿರಲಿ, ಯಾವುದೇ ರಾಜ್ಯದಲ್ಲಿ ಹುಟ್ಟಿದವರಾಗಿರಲಿ, ಯಾವುದೇ ಭಾಷೆ ಮಾತಾಡುತ್ತಿರಲಿ, ನಾವೆಲ್ಲರೂ ಮೊದಲಿನಿಂದ ಕೊನೆಯವರೆಗೂ ಭಾರತೀಯರು ಎಂಬ ಸತ್ಯವನ್ನು ಮರೆಯಬಾರದು.

ನಮ್ಮದು ಪ್ರಜಾಸತ್ತಾತ್ಮಕ ದೇಶವಾಗಿರುವುದರಿಂದ ನಮ್ಮ ದೇಶದ ಆಗುಹೋಗುಗಳ ವಿಷಯವಾಗಿ ನಿರ್ಧಾರವನ್ನು ತೆಗೆದುಕೊಳ್ಳುವವರು ನಮ್ಮಿಂದಲೇ ಚುನಾಯಿಸಲ್ಪಟ್ಟ ಲೋಕಸಭೆಯ ಪ್ರತಿನಿಧಿಗಳು. ಅದರಂತೆಯೇ ರಾಜ್ಯಗಳಲ್ಲಿಯ ವಿದ್ಯಮಾನಗಳ ಬಗ್ಗೆ ನಿರ್ಧಾರ ತೆಗೆದುಕೊಳ್ಳುವವರು ಕೂಡ ನಮ್ಮಿಂದಲೇ ಆರಿಸಲ್ಪಟ್ಟ ಪ್ರತಿನಿಧಿಗಳು. ಆದ್ದರಿಂದ ಸಾರಾಸಾರವಾಗಿ ವಿಚಾರಮಾಡಿ, ವಿದ್ಯಾವಂತ, ಪ್ರಾಮಾಣಿಕ, ಧರ್ಮನಿಷ್ಠ (ಜಾತಿಯಲ್ಲ), ಯಾವುದೇ ಪಕ್ಷಪಾತ ಭೇದಭಾವವಿಲ್ಲದೇ ಎಲ್ಲ ಜನತೆಯ ಹಾಗೂ ನಮ್ಮ ದೇಶದ ಒಳಿತನ್ನೇ ಗಮನದಲ್ಲಿಟ್ಟುಕೊಂಡು ಸಮರ್ಪಕ ನಿರ್ಧಾರಗಳನ್ನು ತೆಗೆದುಕೊಳ್ಳಬಲ್ಲ ಜನರನ್ನು ನಾವು ಪ್ರತಿನಿಧಿಗಳನ್ನಾಗಿ ಚುನಾಯಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.

ನಮ್ಮ ರಾಷ್ಟ್ರವು ಪರರಾಷ್ಟ್ರೀಯರ ಆಡಳಿತ ಶೃಂಖಲೆಗಳಿಂದ ಮುಕ್ತವಾಗಿ ಸ್ವತಂತ್ರವಾದ ದಿನ (ಆಗಸ್ಟ್-೧೫)ವನ್ನು ಪ್ರತಿ ವರ್ಷವೂ ರಾಷ್ಟ್ರೀಯ ಹಬ್ಬದ ದಿನವನ್ನಾಗಿ ಆಚರಿಸುತ್ತೇವೆ. ಧ್ವಜವಂದನೆ, ರಾಷ್ಟ್ರಗೀತೆ, ಭಾಷಣ, ಸಣ್ಣ ಮಕ್ಕಳ ಆಟಪಾಟ ಇತ್ಯಾದಿಗಳೊಂದಿಗೆ ಆ ದಿನದ ಆಚರಣೆ ಮುಗಿಯುತ್ತದೆ. ಈ ರಾಷ್ಟ್ರೀಯ ದಿನದ ಮಹತ್ವವನ್ನು ಅರಿತು, ನಮ್ಮ ಪೂರ್ವಜರು ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರ ನೇತೃತ್ವದಲ್ಲಿ ತಮ್ಮ ಸರ್ವಸ್ವವನ್ನೂ ತ್ಯಾಗಮಾಡಿ, ಎಷ್ಟು ಕಷ್ಟ ಪಟ್ಟಿದ್ದಾರೆ, ಕೆಲವರು ಪ್ರಾಣಾರ್ಪಣೆಯನ್ನೂ ಮಾಡಿದ್ದಾರೆ ಎಂಬುದೆಲ್ಲವನ್ನು ನಾವು ನೆನಪಿಸಿಕೊಂಡು ಅವರಿಗೆ ನಮನವನ್ನು ಅರ್ಪಿಸಬೇಕು. ಅವರ ತ್ಯಾಗ ಬಲಿದಾನದ ಫಲವಾಗಿಯೇ ನಮಗೆ ಈಗ ನಾವು ಜಗತ್ತಿನಲ್ಲಿ ಹೆಮ್ಮೆಯಿಂದ ತಲೆ ಎತ್ತಿ ನಿಲ್ಲುವಂತಾಗಿದೆ. ಆದ್ದರಿಂದ ನಾವೆಲ್ಲರೂ ಜೀವನದಲ್ಲಿ, ವೃತ್ತಿಯಲ್ಲಿ ನಮ್ಮ ರಾಷ್ಟ್ರದ ಒಳಿತಿಗಾಗಿ, ಏಳ್ಗೆಗಾಗಿ ದುಡಿಯಲು ಸನ್ನದ್ಧರಾಗಬೇಕು. ಇಂದಿನ ನಮ್ಮ ಚಿಕ್ಕ ಮಕ್ಕಳು, ಯುವಕ ಯುವತಿಯರು ನಾಳಿನ ಪ್ರಬುದ್ಧನಾಗರಿಕರಾಗುವರು. ಆದ್ದರಿಂದ ಅವರನ್ನು ಒಳ್ಳೆಯ ದೇಶಾಭಿಮಾನಿ, ಹೊಣೆಯರಿತ ನಾಗರಿಕರನ್ನಾಗಿ ಬೆಳೆಸುವ ಹೊಣೆ ಮೊದಲು ತಾಯಿ-ತಂದೆಗಳ ಮೇಲಿದೆ. ಯಾಕೆಂದರೆ "ಮನೆಯೇ ಮೊದಲ ಪಾಠಶಾಲೆ, ತಾಯಿಯೇ ಮೊದಲ ಗುರು" ಎಂದು ಹೇಳುವುದುಂಟು. ಅವರು ತಮ್ಮ ಮಕ್ಕಳಿಗೆ ಛತ್ರಪತಿ ಶಿವಾಜಿ, ಝಾನ್ಸಿ ಲಕ್ಷ್ಮೀಬಾಯಿ, ವೀರವನಿತೆ ಓಬವ್ವ ಇನ್ನೂ ಅನೇಕ ವೀರಧೀರ ಐತಿಹಾಸಿಕ ಪುರುಷರ ಮತ್ತು ವೀರ ಧೀರ ವನಿತೆಯರ ಕಥೆಗಳನ್ನು ಹೇಳಿ ಅವರಲ್ಲಿ ನಮ್ಮ ಮಾತೃಭೂಮಿ ಭಾರತ ದೇಶದ ಬಗ್ಗೆ ರಾಷ್ಟ್ರಾಭಿಮಾನ ಮೂಡಿ ಬೆಳೆಯುವಂತೆ ಮಾಡಬೇಕು. ಈ ದಿಶೆಯಲ್ಲಿ ಎಲ್ಲ ಹಂತಗಳ ವಿದ್ಯಾಸಂಸ್ಥೆಗಳ ಶಿಕ್ಷಕರೂ, ವಿದ್ಯಾರ್ಥಿಗಳು ರಾಷ್ಟ್ರಾಭಿಮಾನಿ, ಹೊಣೆಯರಿತ ನಾಗರಿಕರಾಗಿ ಬೆಳೆಯುವಂತೆ ಮಾಡುವಲ್ಲಿ ಕ್ರಿಯಾಶೀಲರಾಗುವುದು ಅವಶ್ಯ. ❋

## ಹೀಗಿದ್ದರು ನಮ್ಮ ನಾಯಕರು

೧೯೩೦ರಲ್ಲಿ ಮದ್ರಾಸ್ ಪ್ರತ್ಯೇಕ ಪ್ರಾಂತ್ಯವಾಗಿತ್ತು. ಪ್ರಾಂತ್ಯದ ಮುಖ್ಯಸ್ಥರನ್ನು ಪ್ರಧಾನಿ ಎಂದು ಕರೆಯುತ್ತಿದ್ದುದು ಆಗ ರೂಢಿಯಲ್ಲಿತ್ತು. ಆಗ ರಾಜಗೋಪಾಲಾಚಾರಿಯವರು (ರಾಜಾಜಿ) ಕೆಲಕಾಲ ಈ ಹುದ್ದೆಯಲ್ಲಿದ್ದರು. ಈ ಅವಧಿಯಲ್ಲಿ ಒಮ್ಮೆ ಇಂಗ್ಲೆಂಡ್ XI ಮತ್ತು ಭಾರತ XI ತಂಡಗಳ ನಡುವೆ ಕ್ರಿಕೆಟ್ ಪಂದ್ಯವೊಂದು ನಡೆಯುವುದಿತ್ತು. ಪಂದ್ಯದ ವ್ಯವಸ್ಥಾಪಕರು ಪ್ರಧಾನಿ ರಾಜಾಜಿಯವರನ್ನು ಮ್ಯಾಚ್ ವೀಕ್ಷಿಸಲು ಬರುವಂತೆ ಆಹ್ವಾನಿಸಿದರು. ರಾಜಾಜಿಯವರು ಕ್ರಿಕೆಟ್ ವಿಷಯದಲ್ಲಿ ಗಾಂಧೀಜಿಯವರ ಅನುಯಾಯಿಯೇ ಆಗಿದ್ದರು. ಕ್ರಿಕೆಟ್ ಆಟವನ್ನು ಇಬ್ಬರೂ ಅಷ್ಟಾಗಿ ಇಷ್ಟಪಡುತ್ತಿರಲಿಲ್ಲ. ಐದಾರು ಗಂಟೆಗಳ ಕಾಲ ಕ್ರಿಕೆಟ್ ಪಂದ್ಯ ನೋಡುವುದು ಸಮಯ ವ್ಯರ್ಥಮಾಡಿದಂತೆ ಎಂಬುದು ಅವರ ಅಭಿಪ್ರಾಯವಾಗಿತ್ತು. ಆದರೂ ಅವರು ಆಹ್ವಾನ ಪತ್ರಿಕೆಯನ್ನು ತೆಗೆದುಕೊಂಡು, ಸಮಯವಿಲ್ಲವೆಂದು ನಯವಾಗಿಯೇ ಹೇಳಿದರು. ಅವರು ಹೋದನಂತರ ಆಹ್ವಾನ ಪತ್ರಿಕೆಯನ್ನು ತಮ್ಮ ಮೇಜಿನ ಮೇಲಿರಿಸಿ ಹೋದರು.

ರಾಜಾಜಿ ಹೊರಗೆ ಹೋದಾಗ, ಅಕಸ್ಮಾತ್ ಅಲ್ಲಿಗೆ ಬಂದ ಅವರ ಮೊಮ್ಮಗ ಮೇಜಿನ ಮೇಲಿದ್ದ ಆಹ್ವಾನ ಪತ್ರಿಕೆಯನ್ನು ನೋಡಿದ. ಯುವಕನಾಗಿದ್ದ ಅವನಿಗೆ, ಆ ಅಮೋಘ ಕ್ರಿಕೆಟ್ ಪಂದ್ಯವನ್ನು ನೋಡಬೇಕೆಂಬ ಆಸೆಯಾಯಿತು. ಆಹ್ವಾನ ಪತ್ರಿಕೆಯನ್ನು ಎತ್ತಿಕೊಂಡು ಮ್ಯಾಚ್ ನೋಡಲು ಹೋದ. ರಾಜಾಜಿಯವರು ಮತ್ತೆ ಬಂದಾಗ, ಮೇಜಿನ ಮೇಲಿಟ್ಟಿದ್ದ ಆಹ್ವಾನಪತ್ರಿಕೆ ಕಾಣಲಿಲ್ಲ. ಈ ಕೆಲಸವು ಮೊಮ್ಮಗನದೇ ಎಂಬುದು ಅವರಿಗೆ ತಿಳಿಯಿತು. ಅವರು ಅವನನ್ನು ಕರೆಸಿ, ಸ್ವಲ್ಪ ಖಾರವಾಗಿಯೇ ಹೇಳಿದರು : "ಆ ಪತ್ರಿಕೆ ಇದ್ದುದು ಪ್ರಧಾನಿಯ ಹೆಸರಿಗೆ, ನಿನ್ನ ತಾತನ ಹೆಸರಿಗಲ್ಲ, ತಿಳಿಯಿತೇ? ಪ್ರಧಾನಿಯ ಹೆಸರಿಗೆ ಇದ್ದುದನ್ನು ನೀನು ಉಪಯೋಗಿಸಿದ್ದು ತಪ್ಪು. ಇನ್ನೆಂದೂ ಹೀಗೆ ಮಾಡಬೇಡ!"

ಸರ್ಕಾರವು ಕೊಡಮಾಡುವ ಸೌಲಭ್ಯಗಳೇ ಬೇರೆ, ಕುಟುಂಬದ ವ್ಯವಹಾರಗಳೇ ಬೇರೆ ಎಂದು ನಂಬಿ ಅದರಂತೆ ನಡೆದವರು ರಾಜಾಜಿ. ಸರ್ಕಾರದಲ್ಲಿರುವ ವ್ಯಕ್ತಿಗಳು ಸರ್ಕಾರದ ಸವಲತ್ತುಗಳನ್ನು ಕುಟುಂಬದ ಬಳಕೆಗೆ ಉಪಯೋಗಿಸಬಾರದು, ಎಂಬುದು ಅವರ ದೃಢ ನಿಲುವಾಗಿತ್ತು. ಇಂದು ಇಂತಹ ನಾಯಕರು ಎಷ್ಟು ಜನ ಇದ್ದಾರೆ?

(ಸಂಗ್ರಹ)—ಕೆ.ಜಿ.ವಿರೂಪಾಕ್ಷಪ್ಪ